## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ.

ಸಿ.ಡಬ್ಲ್ಯೂ. 8 ಪಿ.ಡಬ್ಲ್ಯೂ. 9

ಸಿ.ಸಿ. ನಂ. 280/2016

| | | |
|---|---|---|
| ಹೆಸರು | ಃ | ನಾಗಪ್ಪ |
| ತಂದೆ ಹೆಸರು | ಃ | ಯಂಕಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ | ಃ | ಎಂ.ಕೋಳೂರು ಗ್ರಾಮ. |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 24-06-2023.

ಮುಖ್ಯ ವಿಚಾರಣೆ ಃ ದಂಡ ಪ್ರಕ್ರಿಯೇ ಸಂಹಿತೆ ಕಲಂ 299 ರ ಅಡಿಯಲ್ಲಿ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ಚಾಸಾ-8 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ಒಂದು ಪಂಚನಾಮೆಯ ದೃಢೀಕೃತ ಪ್ರತಿ ತೋರಿಸಿದ್ದಾಗ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು.

2. ನಿಪಿ 7 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.7 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಆದರೆ ಅಲ್ಲಿ 6 ಜನ ಆರೋಪಿತರನ್ನು ಕೂಡಿಸಿದ್ದರು. ಅವರು ಬಂಗಾರ ಬೆಳ್ಳಿ ಕಳ್ಳತನ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ಕೂಡಿಸಿದ್ದರು. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲ. ಈ ಕೇಸಿನಲ್ಲಿ ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನಾನು ನೋಡಿಲ್ಲ. ( ನಿಪಿ 7 ರ ಮೂಲ ಪ್ರತಿ ಸಿಸಿ ನಂಬರ 446/2016 ರಲ್ಲಿ ಇರುತ್ತದೆ)

3. ಸಾಕ್ಷಿಗೆ ಇನ್ನೊಂದು ಪಂಚನಾಮೆಯ ದೃಢೀಕೃತ ಪ್ರತಿ ತೋರಿಸಿದ್ದಾಗ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ( ನಿಪಿ 8 ರ ಮೂಲ ಪ್ರತಿ ಸಿಸಿ ನಂಬರ 446/2016 ರಲ್ಲಿ ಇರುತ್ತದೆ)

4. ನಿಪಿ 8 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.8 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಈ ಕೇಸಿನಲ್ಲಿ ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನಾನು ನೋಡಿಲ್ಲ.

5. ಸಾಕ್ಷಿಗೆ ಮತ್ತೊಂದು ಪಂಚನಾಮೆಯ ದೃಡೀಕೃತ ಪ್ರತಿ ತೋರಿಸಿದ್ದಾಗ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು. ( ನಿಪಿ 9 ರ ಮೂಲ ಪ್ರತಿ ಸಿಸಿ ನಂಬರ 446/2016 ರಲ್ಲಿ ಇರುತ್ತದೆ)

6. ನಿಪಿ 9 ಕ್ಕೆ ನಾನು 8 ವರ್ಷಗಳ ಹಿಂದೆ ಪೊಲೀಸಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.9 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನಾನು ನಿಪಿ 9 ಪಂಚನಾಮೆಗೆ ಠಾಣೆಯಲ್ಲಿ ಮಾತ್ರ ಸಹಿ ಹಾಕಿದ್ದು ಮತ್ತು ಪೊಲೀಸರು ನನ್ನನ್ನು ಬೇರೆ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

7. ದಿನಾಂಕಃ 21-11-2015 ರಂದು ನನ್ನ ಮತ್ತು ಚಾಸಾ-9 ರವರ ಸಮಕ್ಷಮದಲ್ಲಿ ಆರೋಪಿತರು ಕೃತ್ಯ ಮಾಡಲು ಬಳಸಿದ ಎರಡು ಮೋಟರ ಸೈಕಲ್ ಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವುಗಳನ್ನು ಮದ್ಯಾಹ್ನ 3 ಗಂಟೆಯಿಂದ 3-30 ಗಂಟೆಯ ವರೆಗೆ ಆರೋಪಿತರ ಮನೆಯಲ್ಲಿ ಅಂದರೆ ವೀರಘೊಟ ನಿರಾಶ್ರಿತರ ಕಾಲೋನಿಯ ಆರೋಪಿತರ ಬಾಡಿಗೆ ಮನೆಯಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-9 ರವರು ಸ್ಥಳದಲ್ಲಿಯೋ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ಮೋಟರ ಸೈಕಲ್ ಗಳನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ.

8. ದಿನಾಂಕಃ 21-11-2015 ರಂದು ನನ್ನ ಮತ್ತು ಚಾಸಾ-9 ರವರ ಸಮಕ್ಷಮದಲ್ಲಿ ಆರೋಪಿತರು ಕಳ್ಳತನ ಮಾಡಿದ ವಸ್ತುಗಳನ್ನು ಅವರ ಮನೆಯಿಂದ ಅಂದರೆ ವೀರಘೊಟ ನಿರಾಶ್ರಿತರ ಕಾಲೋನಿಯ ಆರೋಪಿತರ ಬಾಡಿಗೆ ಮನೆಯಲ್ಲಿ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-9 ರವರು ಸ್ಥಳದಲ್ಲಿಯೋ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆ ವಸ್ತುಗಳನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ. ಸದರಿ ಪಂಚನಾಮೆಯನ್ನು ಮದ್ಯಾಹ್ನ 3-40 ರಿಂದ 5 ಗಂಟೆಯ ವರೆಗೆ ಸ್ಥಳದಲ್ಲಿಯೇ ಮಾಡಿ ಮುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ಒಟ್ಟು 18 ಮೊಬೈಲ್ ಪೋನ್‌ಗಳನ್ನು, ನಗದು ಹಣ್ಣ ಮತ್ತು ಆಟಿಕೆಯ ಫೆಕ್ ನೋಟ್‌ಗಳು ಒಂದು ಕ್ಯಾಶ್ ಬ್ಯಾಗ್ ಮತ್ತು ಒಂದು ಅಂಗಿ ಮತ್ತು ಒಂದು ಬಂಗಾರದ ಮಾಂಗಲ್ಯ ಸರ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

9. ದಿನಾಂಕಃ 21-11-2015 ರಂದು ನನ್ನ ಮತ್ತು ಚಾಸಾ-9 ರವರ ಸಮಕ್ಷಮದಲ್ಲಿ ಆರೋಪಿತರು ಕಳ್ಳತನ ಮಾಡಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ನಮ್ಮ ಸಮಕ್ಷಮದಲ್ಲಿ ಗುನ್ನಾ ಸ್ಥಳದ ಪಂಚನಾಮೆ ಆರೋಪಿತರು ತೋರಿಸಿದಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಮತ್ತು ಚಾಸಾ-9 ರವರು ಸ್ಥಳದಲ್ಲಿಯೋ ಸಹಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಓದಿ ಹೇಳಿದ ನಂತರ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.